ಆದ್ಯಾಶಕ್ತಿ

❁ ಯಾವಾಗ ಭಗವಂತ ಸೃಷ್ಟಿ, ಸ್ಥಿತಿ, ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ, ಆಗ ಆತನಿಗೇ ಸಗುಣಬ್ರಹ್ಮ ಅಥವಾ ಆದ್ಯಾಶಕ್ತಿ ಅಂತ ಹೆಸರು; ಯಾವಾಗ ಆತನನ್ನು ತ್ರಿಗುಣಾತೀತ ಎಂಬುದಾಗಿ ಭಾವಿಸುತ್ತೇವೊ, ಆಗ ಆತನಿಗೆ ವಾಙ್ಮನಾತೀತ ನಿರ್ಗುಣಬ್ರಹ್ಮ ಅಂತ ಹೆಸರು.

❁ ಯಾರು ಶ್ಯಾಮೆಯೋ ಆತನೇ ಬ್ರಹ್ಮ. ಯಾರು ಸಾಕಾರನೋ ಆತನೇ ನಿರಾಕಾರ. ಯಾರು ಸಗುಣನೋ ಆತನೇ ನಿರ್ಗುಣ. ಬ್ರಹ್ಮನೇ ಶಕ್ತಿ; ಶಕ್ತಿಯೇ ಬ್ರಹ್ಮ. ಇಬ್ಬರಿಗೂ ಭೇದವಿಲ್ಲ. ಯಾರು ಸಚ್ಚಿದಾನಂದಮಯನೋ ಆತನೇ ಸಚ್ಚಿದಾನಂದಮಯಿ.

❁ ಭಗವದ್ರೂಪಗಳನ್ನು ಒಪ್ಪಿಕೊಳ್ಳಬೇಕು. ಜಗದ್ಧಾತ್ರೀ ರೂಪದ ಸಂಕೇತ ನಿನಗೆ ಗೊತ್ತೇ? ಯಾರು ಈ ಜಗತ್ತನ್ನು ಧಾರಣೆ ಮಾಡಿಕೊಂಡಿದ್ದಾಳೋ ಅವಳು. ಆಕೆ ಈ ಜಗತ್ತನ್ನು ಹೊತ್ತುಕೊಂಡಿರದಿದ್ದರೆ, ಪಾಲಿಸದಿದ್ದರೆ ಅದು ತನ್ನ ಸ್ಥಾನದಿಂದ ಕೆಳಕ್ಕೆ ಬಿದ್ದು ನಾಶವಾಗಿಬಿಡುತ್ತದೆ. ಮನಸ್ಸೆಂಬ ಆನೆಯನ್ನು ಯಾರು ವಶಪಡಿಸಿಕೊಳ್ಳುತ್ತಾನೊ ಆತನ ಹೃದಯದಲ್ಲಿ ಆಕೆ ವ್ಯಕ್ತವಾಗುತ್ತಾಳೆ. ಅದಕ್ಕೇ ಸಿಂಹವಾಹಿನಿಯ ಸಿಂಹ ಆನೆಯನ್ನು ಒಂದು ಹದ್ದುಬಸ್ತಿನಲ್ಲಿ ಇಟ್ಟುಕೊಂಡಿರುವುದು.

❁ ನಾವು ಏನನ್ನು ನೋಡುತ್ತೇವೊ, ಭಾವಿಸುತ್ತೇವೊ ಅವೆಲ್ಲ ಆದ್ಯಾಶಕ್ತಿಯೆ, ಚಿಚ್ಛಕ್ತಿಯ ಅಭಿವ್ಯಕ್ತಿಯೆ. ಸೃಷ್ಟಿ, ಪಾಲನೆ, ಸಂಹಾರ, ಜೀವ, ಜಗತ್ತು, ಧ್ಯಾನ, ಧ್ಯಾತಾ, ಭಕ್ತಿ, ಪ್ರೇಮ, ಎಲ್ಲಾ ಆಕೆಯ ಐಶ್ವರ್ಯ.

❁ ಆದರೆ ಬ್ರಹ್ಮನಿಗೂ ಶಕ್ತಿಗೂ ಅಭೇದ. ಲಂಕೆಯಿಂದ ಹಿಂದಿರುಗಿದ ನಂತರ ಹನುಮಂತ ರಾಮನನ್ನು ಸ್ತೋತ್ರ ಮಾಡುತ್ತಾ ಹೇಳಲಾರಂಭಿಸಿದ, 'ಹೇ ರಾಮ, ನೀನೇ ಪರಬ್ರಹ್ಮ, ಸೀತೆಯೇ ನಿನ್ನ ಶಕ್ತಿ; ಆದರೆ ನೀವಿಬ್ಬರೂ ಒಂದೇ – ಭೇದರಹಿತರು.' ಬ್ರಹ್ಮ, ಶಕ್ತಿ ಹಾವಿನ ಸೊಟ್ಟ ಸೊಟ್ಟ ಗತಿ ಇದ್ದ ಹಾಗೆ. ಹಾವನ್ನು ಭಾವಿಸಿದರೆ, ಅದರೊಡನೆ ಸೊಟ್ಟ ಸೊಟ್ಟ ಗತಿಯನ್ನೂ ಭಾವಿಸಲೇಬೇಕಾಗುತ್ತದೆ. ಹಾವಿನ ಸೊಟ್ಟ ಸೊಟ್ಟ ಗತಿಯನ್ನು ಭಾವಿಸಿದರೆ, ಅದರೊಡನೆ ಹಾವನ್ನೂ ಭಾವಿಸಲೇಬೇಕಾಗುತ್ತದೆ. ಹಾಲಿನ ಬಿಳಿ ಬಣ್ಣವನ್ನು ಭಾವಿಸಿದರೆ ಅದರೊಡನೆ ಹಾಲನ್ನೂ ಭಾವಿಸಲೇಬೇಕಾಗುತ್ತದೆ. ನೀರನ್ನು ಭಾವಿಸಿದರೆ, ಅದರೊಡನೆ ಅದರ ತೊಯ್ಯುವ ಶಕ್ತಿಯನ್ನೂ ಭಾವಿಸಲೇಬೇಕಾಗುತ್ತದೆ. ನೀರಿನ ತೊಯ್ಯುವ ಶಕ್ತಿಯನ್ನು ಭಾವಿಸಿದರೆ, ಅದರೊಡನೆ ನೀರನ್ನೂ ಭಾವಿಸಲೇಬೇಕಾಗುತ್ತದೆ.

❁ ಆದ್ಯಾಶಕ್ತಿ, ಎಂದರೆ ಮಹಾಮಾಯೆ ಬ್ರಹ್ಮನನ್ನು ಮುಚ್ಚಿಬಿಟ್ಟಿದೆ. ಈ ಆವರಣ ಹೋದ ಒಡನೇ ಅನುಭವವಾಗುತದೆ 'ಏನಾಗಿದ್ದೆನೋ ಅದೇ ಆಗಿದ್ದೇನೆ', 'ನಾನೇ ನೀನು; ನೀನೇ ನಾನು' ಅಂತ.

❁ ಅಲೆ ನೀರಿಗೆ ಸೇರಿದುದೇ ವಿನಾ ನೀರು ಅಲೆಗೆ ಸೇರಿದುದಲ್ಲ. ವ್ಯಕ್ತಿಯಲ್ಲಿ ಆವರಣ ವಿರುವವರೆಗೆ 'ತಾಯಿ, ತಾಯಿ' ಎಂದು ಕರೆಯುವುದೇ ಶ್ರೇಯಸ್ಕರ. ಭಕ್ತ ಭಗವಂತನನ್ನು ಸಂಬೋಧಿಸಿ ಹೇಳಬೇಕು: 'ನೀನು ತಾಯಿ, ನಾನು ನಿನ್ನ ಸಂತಾನ.' ಈ ಭಾವವೇ ಶ್ರೇಯಸ್ಕರ.

❁ ಯಾರು ಬ್ರಹ್ಮನೊ ಆತನೇ ಆದ್ಯಾಶಕ್ತಿಯಾಗಿದ್ದಾನೆ. ನಿಷ್ಕ್ರಿಯನಾಗಿರುವಾಗ ಆತನಿಗೇ ಬ್ರಹ್ಮ ಅಂತ ಹೆಸರು; ಪುರುಷ ಅಂತ ಹೆಸರು. ಸೃಷ್ಟಿ ಸ್ಥಿತಿ ಪ್ರಳಯ ಕಾರ್ಯಗಳನ್ನು ಮಾಡುವಾಗ ಆತನಿಗೇ ಶಕ್ತಿ ಅಂತ ಹೆಸರು, ಪ್ರಕೃತಿ ಅಂತ ಹೆಸರು. ಪುರುಷ ಮತ್ತು ಪ್ರಕೃತಿ. ಯಾರು ಪುರುಷನೋ ಆತನೇ ಪ್ರಕೃತಿ. ಆನಂದಮಯನೇ ಆನಂದಮಯಿ.

❁ ಎಲ್ಲವೂ ಭಗವತಿಯೇ ಆಗಿರುವುದು. ದುಷ್ಟರೂ ಕೂಡ, ಭಾಗವತ ಪಂಡಿತನ ಸೋದರ ಕೂಡ. ದುಷ್ಟರನ್ನೂ ವರ್ಜಿಸಿಬಿಡುವ ಹಾಗಿಲ್ಲ. ತುಳಸೀದಳ ಒಣಗಿಹೋಗಲಿ ಅಥವಾ ಬಹಳ ಪುಟ್ಟದಾಗಿರಲಿ – ಪೂಜೆಗೆ ಆಗುತ್ತದೆ.

❁ ಯಾರಿಗೆ ಪುರುಷಜ್ಞಾನವಿರುವುದೋ ಅವರಿಗೆ ಪ್ರಕೃತಿ ಜ್ಞಾನವೂ ಇದ್ದೇ ಇರುತ್ತದೆ. ತಂದೆಯ ಜ್ಞಾನ ಇರುವವರಿಗೆ ತಾಯಿಯ ಜ್ಞಾನವೂ ಇದ್ದೇ ಇರುತ್ತದೆ. ಯಾರಿಗೆ ಕತ್ತಲೆಯ ಜ್ಞಾನವಿರುವುದೋ, ಅವರಿಗೆ ಬೆಳಕಿನ ಜ್ಞಾನವೂ ಇರುತ್ತದೆ. ಸುಖದ ಜ್ಞಾನ ಇರುವವರಿಗೆ ದುಃಖದ ಜ್ಞಾನವೂ ಇರುತ್ತದೆ.

❁ ಕುಮಾರಿ ಪೂಜೆ ಮಾಡುತ್ತಾರಲ್ಲ ಏಕೆ? ಎಲ್ಲಾ ಸ್ತ್ರೀಯರೂ ಭಗವತಿಯ ಒಂದೊಂದು ರೂಪ. ಆದರೆ ಶುದ್ಧಾತ್ಮಳಾದ ಕುಮಾರಿಯಲ್ಲಿ ಆಕೆ ವಿಶೇಷವಾಗಿ ವ್ಯಕ್ತವಾಗಿರುತ್ತಾಳೆ.

❁ ಒಮ್ಮೆ ನಾನು ರಾಮಲಾಲನ ತಾಯಿಯನ್ನು ಬಯ್ಯುವುದರಲ್ಲಿದ್ದು ತಡೆದುಕೊಳ್ಳಬೇಕಾಯಿತು. ಭಗವತಿಯ ಒಂದು ರೂಪವೇ ಆಗಿ ಅವಳು ಕಂಡುಬಂದಳು. ಕುಮಾರಿಯರ ಆಂತರ್ಯದಲ್ಲಿ ಭಗವತಿ ಕಾಣುವುದರಿಂದ ನಾನು ಅವರನ್ನು ಪೂಜಿಸುತ್ತಿದ್ದೇನೆ.

'ಶ್ರೀರಾಮಕೃಷ್ಣ ವಚನವೇದ'ದಿಂದ

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ ೧

ಸ್ವಾಮಿ ಅಖಂಡಾನಂದರು (೧೮೬೪–೧೯೩೭) ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರು. ಗಂಗಾಧರ ಗಂಗೋಪಾಧ್ಯಾಯ ಎಂಬುದು ಅವರ ಮೊದಲಿನ ಹೆಸರು. ಶ್ರೀರಾಮಕೃಷ್ಣರ ವಿಶೇಷ ಪ್ರೀತಿ ಹಾಗೂ ಕೃಪೆಗೆ ಪಾತ್ರರಾಗಿದ್ದರು ಅವರು. ತಮ್ಮ ನೆಚ್ಚಿನ ಗುರುಗಳ ಮಹಾಸಮಾಧಿಯ ನಂತರ ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ಇತರ ಶಿಷ್ಯರೊಂದಿಗೆ ಸಂನ್ಯಾಸ ಸ್ವೀಕಾರ ಮಾಡಿ ಸ್ವಾಮಿ ಅಖಂಡಾನಂದರಾದರು. ಅನಂತರ ಸ್ವಾಮೀಜಿಯೊಂದಿಗೆ ಹಿಮಾಲಯದಲ್ಲೆಲ್ಲ ಓಡಾಡಿ ಪರಿವ್ರಾಜಕ ಜೀವನ ನಡೆಸಿದ ಅವರು ಟಿಬೆಟ್, ಚೀನಾ ದೇಶಗಳಲ್ಲೂ ಸುತ್ತಾಡಿ ಅಪಾರ ಅನುಭವ ಪಡೆದರು. ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಸೇವೆಯ ಆದರ್ಶವನ್ನು ಮೊದಲ ಬಾರಿಗೆ ಅನುಷ್ಠಾನಕ್ಕೆ ತಂದ ಅವರು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರೂ ಆಗಿದ್ದರು. ಅವರೊಂದಿಗೆ ನಡೆದ ಮಾತುಕತೆಗಳನ್ನು ಸ್ವಾಮಿ ನಿರಾಮಯಾನಂದರು ಬಂಗಾಳಿಯಲ್ಲಿ 'ಸ್ವಾಮಿ ಅಖಂಡಾನಂದೇರ್ ಸ್ಮೃತಿ–ಸಂಚಯ್' ಎಂಬ ಗ್ರಂಥದಲ್ಲಿ ದಾಖಲಿಸಿದ್ದಾರೆ. ಈ ಕೃತಿ ೧೯೭೬ರಲ್ಲಿ ಪ್ರಕಟವಾಯಿತು. (ಇದು The Call of the Spirit ಎಂದು ಇಂಗ್ಲಿಷಿನಲ್ಲಿ ಪ್ರಕಟವಾಗಿದೆ). ಬಂಗಾಳಿ ಮೂಲದಿಂದ ಈ ಕೃತಿಯನ್ನು ಕನ್ನಡಕ್ಕೆ ಅಚ್ಚುಕಟ್ಟಾಗಿ ಅನುವಾದಿಸಿಕೊಟ್ಟಿರುವ ಲೇಖಕಿ, ವಾರಣಾಸಿ ರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮುನ್ನುಡಿ

ಶ್ರೀಭಗವಾನ್ ರಾಮಕೃಷ್ಣರು ಹಾಗೂ ಅವರ ಅಂತರಂಗದ ಲೀಲಾಸಂಗಿಗಳು ಎಂದೆಂದಿಗೂ ಅಭೇದ. 'I and my father in Heaven are one'. ಪರಮಪೂಜ್ಯ ಅಖಂಡಾನಂದಜೀ ಅವರಲೊಬ್ಬರು. 'ಶಿವಜ್ಞಾನೇ ಜೀವಸೇವಾ' ಎಂಬ ಶ್ರೀರಾಮಕೃಷ್ಣರ ಉಕ್ತಿಯನ್ನು ಅವರು ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದಿದ್ದರು. ಮುಂದಿನ ದಿನಗಳಲ್ಲಿ ಅವರು ಸಾರಗಾಛಿ ಆಶ್ರಮದಲ್ಲಿ ಸೇರುತ್ತಿದ್ದ ಭಕ್ತರ ಮುಂದೆ ತಮ್ಮ ಜೀವನದ ಕೆಲವು ಅನುಭವಗಳನ್ನು ಹೇಳಿದ್ದರು. ಮಹಾಭಾಗ್ಯಶಾಲಿಗಳೂ, ಸ್ವಾಮೀಜಿಯವರಿಗೆ ಪ್ರೀತಿಪಾತ್ರರೂ ಆದ ಲೇಖಕರು ಅವರ ಪದತಲದಲ್ಲಿ ಕುಳಿತು ಅವರ ಮಾತುಗಳನ್ನು ಕೇಳಿ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದರು. ಈಗ ಅವರು ಅವುಗಳನ್ನು ಪ್ರಕಟಿಸುವ ಮೂಲಕ ಧರ್ಮಪಿಪಾಸುಗಳ ಕೃತಜ್ಞತೆಗೆ ಪಾತ್ರರಾಗುವರೆಂಬುದರಲ್ಲಿ ಸಂದೇಹವೇ ಇಲ್ಲ. ಈ ನುಡಿಗಳೆಲ್ಲ ಭಗವದ್ಭಾವದಿಂದ ದೀಪ್ತವಾಗಿವೆ ಎಂಬುದು ನಿಃಸಂದೇಹ. ಈ ಸ್ಮೃತಿಸಂಚಯವನ್ನೋದಿ ಅದನ್ನು ಅಂತರ್ಗತ ಮಾಡಿಕೊಂಡವರೆಲ್ಲರಲ್ಲೂ ಆಧ್ಯಾತ್ಮಿಕ ಪ್ರೇರಣೆ ಉಂಟಾಗಲಿ ಎಂದು ಪ್ರಾರ್ಥಿಸುತ್ತೇನೆ.

– ಧ್ಯಾನಾತ್ಮಾನಂದ

ಸಾರಗಾಛಿ, ೧೮೩೫ : ಜನವರಿಯ ಕೊನೆ ಭಾಗ. ಸ್ವಾಮಿ ವಿವೇಕಾನಂದರ ಜನ್ಮತಿಥಿಯ ಮಾರನೆಯ ದಿನ. ಸಂಜೆಯ ಆರತಿಯ ಧ್ವನಿ ಪ್ರಾಂಗಣದಲ್ಲಿ ಸಂಪೂರ್ಣವಾಗಿ ಕಲೆತು ಕೃಷ್ಣಾಷ್ಟಮಿಯ ಅಂಧಕಾರದಲ್ಲಿ ಆಶ್ರಮವನ್ನೊಂದು ಮಧುರ ರಹಸ್ಯದಿಂದ ಆವರಿಸಿದೆ. ವಿಶಾಲವಾದ ಆಕಾಶದಡಿಯ ಅಸೀಮ ಶಾಂತಿಯಲ್ಲಿ ಆಶ್ರಮವು ಧ್ಯಾನಮಗ್ನವಾದಂತಿದೆ. ಕೆಲವು ಬ್ರಹ್ಮಚಾರಿ ಹಾಗೂ ಭಕ್ತರು ಶ್ರೀ ಬಾಬಾರವರ (ಸ್ವಾಮಿ ಅಖಂಡಾನಂದರನ್ನು ಸಂನ್ಯಾಸಿಗಳು ಹಾಗೂ ಭಕ್ತರು 'ಬಾಬಾ' ಎಂದೇ ಕರೆಯುತ್ತಿದ್ದರು.) ಸಮೀಪ ಬಂದು ಕುಳಿತಿದ್ದಾರೆ. ಬಾಬಾ ಕೋಣೆಯ ಹೊರಗಿನ ವರಾಂಡದಲ್ಲಿ ಕುರ್ಚಿಯಲ್ಲಿ ಕುಳಿತು ಶ್ರೀರಾಮಕೃಷ್ಣ ಮಂದಿರದ ಭಜನೆಯನ್ನು ಆಲಿಸುತ್ತಿದ್ದಾರೆ. ಭಜನೆ ಮುಗಿದು ಬಹಳ ಸಮಯದ ಮೌನದ ನಂತರ ಕೈಮುಗಿದು ಹೇಳುತ್ತಿದ್ದಾರೆ –

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾऽಮೃತಂ ಗಮಯ ।

ತರುವಾಯ ಹೇಳಿದರು: "ಈಶೋಪನಿಷತ್ತಿನಲ್ಲಿದೆ, ಯಾರು ಆತ್ಮಜ್ಞಾನಕ್ಕಾಗಿ ಶ್ರಮಿಸುವುದಿಲ್ಲವೋ ಅವರು ಆತ್ಮಘಾತಕರು ಎಂದು. ಈ ಪ್ರಯತ್ನದಲ್ಲಿ ಯಾರ ಜೀವನವು ಕಳೆಯುತ್ತದೊ ಅವರೇ ಧನ್ಯರು. 'ಆತ್ಮ' ಎಂದರೇನು? ಆತ್ಮದ ವಿಚಾರವಾಗಿ ಮೊದಲು ಕೇಳಬೇಕು, ನಂತರ ಮನನ ಮಾಡಬೇಕು, ಅದಾದ ಮೇಲೆ ಧ್ಯಾನಿಸಬೇಕು. ಯಾಜ್ಞವಲ್ಕ್ಯರು ಮೈತ್ರೇಯಿಗೆ ತಿಳಿಸಿಕೊಡುತ್ತಿದ್ದರು. ಆತ್ಮವೇ ಎಲ್ಲಕ್ಕಿಂತ ಪ್ರಿಯವಾದುದು. ಆತ್ಮಕ್ಕಾಗಿಯೇ ಎಲ್ಲವೂ ಪ್ರಿಯವು:

ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ
ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ।

ನ ವಾ ಅರೇ ವಿತ್ತಸ್ಯ ಕಾಮಾಯ ವಿತ್ತಂ ಪ್ರಿಯಂ ಭವತಿ
ಆತ್ಮನಸ್ತು ಕಾಮಾಯ ವಿತ್ತಂ ಪ್ರಿಯಂ ಭವತಿ।
ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ
ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ॥ *(ಬೃ.ಆ.ಉ.೬)*

"ಆತ್ಮವಸ್ತು ಮಾತ್ರವೇ ಇರುವುದು, ಮತ್ತಿನ್ನೇನೂ ಇಲ್ಲ. ಆತ್ಮದಿಂದಲೇ ಎಲ್ಲವೂ, ಆತ್ಮದಲ್ಲಿಯೇ ಎಲ್ಲವೂ. ಎಲ್ಲದರಲ್ಲೂ ಇದೇ ಆತ್ಮವಿದೆ, ಕೆಲವೆಡೆ ಸುಪ್ತವಾಗಿರುವುದು. ಅದನ್ನು ಜಾಗೃತ ಗೊಳಿಸಬೇಕು. ಆತ್ಮವನ್ನು express ಮಾಡಲು (ಪ್ರಕಾಶಗೊಳಿ ಸಲು) ಎಲ್ಲರೂ ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಆ ಪ್ರಯ ತ್ನವೇ ಸಾಧನೆ. ಅದಕ್ಕಾಗಿ ಏನು ಮಾಡುತ್ತೇವೊ ಅದೇ ಸಾಧನೆ – ತಿಳಿದು ಮಾಡಿದರೂ, ತಿಳಿಯದೆ ಮಾಡಿದರೂ ಕೂಡ. ಈ ಆತ್ಮದ ಅನುಭೂತಿಯಾದಾಗ ಅದರ ಅಸ್ತಿತ್ವವು ಎಲ್ಲೆಡೆಯೂ ಗೋಚರಿಸುವುದು. ಅದೇ ಸಿದ್ಧಿ. ಇದನ್ನು ಪಡೆ ಯುವುದೇ ನಮ್ಮ ಗುರಿ. ಎಲ್ಲರೂ ಈ ಅನುಭೂತಿಯನ್ನು ಮತ್ತೆ ಪಡೆಯ ಬೇಕು. ಏಕೆಂದರೆ ಇದೇ ನಮ್ಮ ನಿಜಸ್ವರೂಪ. 'ನನಗದು ಅಸಾಧ್ಯ, ನಾನು ದುರ್ಬಲ' ಎಂದುಕೊಳ್ಳಬೇಡಿ. ಗೀತೆಯಲ್ಲಿ ಭಗವಂತನು ಹೇಳುತ್ತಾನೆ – ವಿಷಾದವುಂಟಾದಾಗಲೆಲ್ಲ ಈ ಮಾತನ್ನು ನೆನಪಿನಲ್ಲಿಡಬೇಕು :

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ *(೨.೩)*

" 'ನನಗೆ ಸಾಧ್ಯವಿಲ್ಲ, ಇದು ನನ್ನಿಂದ ಆಗುವುದಿಲ್ಲ' ಎಂದು ಅರ್ಜುನನು ಅಂದುಕೊಂಡಿದ್ದನು. 'ಬಂಧುಬಾಂಧವರಿಗೆಲ್ಲ ದುಃಖ, ಕಷ್ಟಗಳನ್ನು ಕೊಡುವುದಕ್ಕಿಂತ ಮರಣವೇ ಲೇಸು. ಭಿಕ್ಷೆ ಬೇಡಿ ತಿನ್ನುವುದೇ ಒಳ್ಳೆಯದು.' ಭಗವಂತನು ತನ್ನ ಸಾರಥಿ, ಗುರು, ಸ್ನೇಹಿತ ಎಂಬುದನ್ನು ಅರ್ಜುನ ಮರೆತಿದ್ದಾನೆ, ಮಾಯೆಯಲ್ಲಿ ಮುಳುಗಿದ್ದಾನೆ. ಆದ್ದರಿಂದ ಭಗವಂತನು ಅವನಿಗೆ ಆತ್ಮಜ್ಞಾನವನ್ನು ಹೊಂದಲು ಉತ್ತೇಜಿಸುತ್ತಿದ್ದಾನೆ. ಪ್ರತಿ ಯುಗದಲ್ಲಿಯೂ ಆತನು ಅದಕ್ಕಾಗಿ ಬರುತ್ತಿದ್ದಾನೆ.

"ಆತನನ್ನು ಪಡೆಯುವುದೇನು ಸುಲಭವೆ? ಅವತಾರ ಪುರುಷರು ಸಾಕ್ಷಾತ್ ಭಗವಂತನೇ. ಅವರೂ ಅದೆಷ್ಟು ತಪಸ್ಸು–ಸಾಧನೆಗಳನ್ನು ಮಾಡಬೇಕಾಗುವುದು! ಬೇರೆಯವರ ಮಾತನ್ನು ಬಿಡಿ. ಪೂರ್ಣ ಮನಸ್ಸಿನಿಂದ ಆತನನ್ನು ಪ್ರಾರ್ಥಿ ಸುತ್ತ ಹೋಗುವುದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಆತನಿಗೆ ಹೇಳಬೇಕಾದುದಿಷ್ಟೆ – 'ದರ್ಶನ ನೀಡು, ದರ್ಶನ ನೀಡು. ನನಗಿನ್ನೇನೂ ಬೇಡ, ಸ್ವರ್ಗಸುಖವೂ ಬೇಡ. ನನಗೆ ಬೇಕಾದುದು ನೀನು ಮಾತ್ರ', 'ಪ್ರಭು, ನನ್ನ ಭೋಗವಾಸನೆಗಳನ್ನು ಅಳಿಸಿಹಾಕು' ಎಂದು ಜೊತೆಯಲ್ಲೇ ಪ್ರಾರ್ಥಿಸಬೇಕು.

"ಸ್ವಾರ್ಥಪರತೆ, ಸಂಕೀರ್ಣತೆಗಳಿರುವಾಗ ಆತ್ಮೋನ್ನತಿಯು ಅಸಂಭವ. ಸುಖಭೋಗಗಳ ಇಚ್ಛೆ ಎಳ್ಳಷ್ಟಿದ್ದರೂ ನಡೆಯದು. ಪ್ರಭು, ನಾನೇಕೆ ಸುಖವನ್ನು ಬೇಡಲಿ? ನೀನೆಷ್ಟು ಬಾರಿ ದೇಹ ಧಾರಣೆಯನ್ನು ಮಾಡಿ ಬಂದಿರುವೆ! ನಿನಗೆಂದೂ ಸುಖವು ದೊರೆಯಲಿಲ್ಲ. ನೀನು ಎಲ್ಲರಿಗಿಂತಲೂ ಹೆಚ್ಚಾಗಿಯೇ ದುಃಖ ಜೀವನವನ್ನು ನಡೆಸಿ ಹೋಗಿದ್ದೀಯೆ. ರಾಮನ ರೂಪತಾಳಿ ರಾಜಪುತ್ರನಾಗಿ ಬಂದಾಗ ಜೀವನದ ಶ್ರೇಷ್ಠ ಭಾಗವನ್ನು ವನ ವಾಸದಲ್ಲಿ ಕಳೆದಿರುವೆ. ವನವಾಸವನ್ನು ಕಳೆದಾಗ ಎಷ್ಟು ಕಷ್ಟಪಟ್ಟು ಸೀತೆಯ ಉದ್ಧಾರವಾಯಿತು! ಆಮೇಲೆ ನೀನು ಸೀತೆಯನ್ನು ಕಳೆದುಕೊಂಡೆ. ಕೃಷ್ಣನ ರೂಪದಲ್ಲಿ ರಾಜನ ಪುತ್ರನಾಗಿ ಕಾರಾಗೃಹದಲ್ಲಿ ಜನ್ಮವೆತ್ತಿದೆ! ಅನಂತರ ಬಾಲ್ಯದಲ್ಲಿ ತಾಯ ಹಾಲಿನಿಂದಲೂ ವಂಚಿತನಾದೆ! ಗೋಪಾಲರ ಮನೆ ಯಲ್ಲಿ ಬೆಳೆದೆ! ಜೀವನವಿಡೀ ಬರಿಯ ಯುದ್ಧ ಹಾಗೂ ದುಷ್ಟಸಂಹಾರ! ಎಂದೂ ಶಾಂತಿ ಸಿಗಲಿಲ್ಲ; ಜಗತ್ತಿನಲ್ಲಿ ಶಾಂತಿಸ್ಥಾಪನೆಯ ಪ್ರಯತ್ನ ಮಾಡಿದರೂ ಕುರುಕ್ಷೇತ್ರದ ಅಶಾಂತಿಗೆ ನೀನೇ ಹೊಣೆಯೆಂದು ದೂಷಿಸಿದರು. ನೀನು ಶಾಪಗ್ರಸ್ತನಾದೆ. ಸಿಂಹಾಸನಕ್ಕಾಗಿ ಲೀಲೆಯನ್ನಾಡಿದೆ, ಆದರೆ ಎಂದೂ ಸಿಂಹಾಸನದಲ್ಲಿ ಕೂರಲಿಲ್ಲ. ನಿನ್ನ ಕಣ್ಣೆದುರೇ ಬಂಧುಬಾಂಧವರೆಲ್ಲರೂ ಸಾಯುತ್ತಿರುವುದನ್ನು ನೋಡಿದೆ. ಕೊನೆಗೆ ವಿನಾಕಾರಣ ವ್ಯಾಧನ ಬಾಣದಿಂದ ಪ್ರಾಣವನ್ನು ಕಳೆದು ಕೊಂಡೆ! ಬುದ್ಧರೂಪದಲ್ಲಿ, ಕ್ರಿಸ್ತರೂಪದಲ್ಲಿ ಜೀವನದುದ್ದಕ್ಕೂ ಎಷ್ಟೊಂದು ಕಷ್ಟಗಳನ್ನನುಭವಿಸಿದೆ! ಅದೆಷ್ಟೋ ದಿನ ಮಲಗಲು ಸ್ಥಳವೂ ಸಿಗಲಿಲ್ಲ! ಆಮೇಲೆ ನಿನ್ನ ಈ ನೂತನ ರೂಪದಲ್ಲಿ, ನಿನ್ನ ಹಿಂದಿನ ಅಭಿವ್ಯಕ್ತಿಗಳಾವುವೂ ಸುಳ್ಳಲ್ಲ, ಧರ್ಮಜೀವನವೆಂದರೆ ಹಗಲುಗನಸಲ್ಲ; ಭೋಗ ಎಂದಿಗೂ ಗುರಿಯಲ್ಲ ಎಂದು ಜಗತ್ತಿಗೆ ತೋರಿಸಿಕೊಡಲು ಅದೆಷ್ಟು ಕಷ್ಟಪಟ್ಟೆ!

"ದೀನತೆಯ ಅವತಾರ! ಉದ್ಧತ ಜಗತ್ತಿಗೆ ದೈನ್ಯತೆಯನ್ನು ಕಲಿಸಲು ಬಂದಿದ್ದರೂ ನಿನ್ನಲ್ಲಿ ಯಾವ ಬಾಹ್ಯಾಡಂಬರವೂ ಇರಲಿಲ್ಲ. ಒಬ್ಬ ಶ್ರೀಮಂತ ಅವರನ್ನು ತೋಟದ ಮಾಲಿ ಎಂದೆಣಿಸಿ, ಅವರ ಬಳಿಸಾರಿ ಹೂ ಕೇಳಿದ್ದರು. ಕೂಡಲೇ ಅವರು ಹೋಗಿ ಹೂವನ್ನು ಕಿತ್ತು ತಂದುಕೊಟ್ಟಿದ್ದರು. ಇದೇ ರೀತಿ ಅವರನ್ನು ಒಮ್ಮೆ ಕೆಲಸದವನೆಂದು ಭಾವಿಸಿ ತಂಬಾಕು ಅಣಿಮಾಡಲು ಹೇಳಿದರು. ಕೂಡಲೆ ಅವರು ತಂಬಾಕು ಅಣಿಮಾಡಿ ಕೊಟ್ಟಿದ್ದರು. ದೀನರ ಎಂಜಲನ್ನು ಬಳಿದಿದ್ದರು. ಜಾಡಮಾಲಿಯ ಪಾಯಿಖಾನೆಯನ್ನು ಸ್ವಚ್ಛಗೊಳಿಸಿದ್ದರು!

"ಕೇವಲ ನಾಮಜಪ ಮತ್ತು ನಿರಂತರ ಭಗವಂತನ ಚಿಂತನೆ, ಧ್ಯಾನ ಇವಲ್ಲದೆ ನಮಗೆ ಬೇರೆ ಮಾರ್ಗವಿಲ್ಲ. ಮನಶ್ಶುದ್ಧಿಗಾಗಿ ನಿಷ್ಕಾಮ ಕರ್ಮ–ಸೇವಾಧರ್ಮವನ್ನು ಮಾಡ ಬೇಕು.

"ಶ್ರೀಚೈತನ್ಯದೇವರು ವಿಶೇಷವಾಗಿ ನಾಮಜಪದ ಪ್ರಚಾರ ಕ್ಕಾಗಿ ಬಂದರು:

ನಾಮ್ನಾಮಕಾರಿ ಬಹುಧಾ ನಿಜಸರ್ವಶಕ್ತಿ–
ಸ್ತತ್ರಾರ್ಪಿತಾ ನಿಯಮಿತಃ ಸ್ಮರಣೇ ನ ಕಾಲಃ ।
ಏತಾದೃಶೀ ತವ ಕೃಪಾ ಭಗವನ್ಮಮಾಪಿ
ದುರ್ದೈವಮೀದೃಶಮಿಹಾಜನಿ ನಾನುರಾಗಃ ॥

[ನಿನಗೆ ಅನೇಕ ಹೆಸರುಗಳುಂಟು, ಎಲ್ಲದರಲ್ಲಿಯೂ ಒಂದೇ ರೀತಿಯ ಶಕ್ತಿ, ಸ್ಮರಣೆ ಮಾಡಲು ಯಾವ ನಿಯಮಿತ ಕಾಲವೂ ಇಲ್ಲ. ಇಷ್ಟಬಂದಾಗ ಮಾಡಬಹುದು. ಸ್ವಾಮಿ, ನಿನ್ನ ದಯೆ

ಅಪಾರವಾದುದು. ಆದರೂ ನಾನೆಷ್ಟು ದುರ್ಭಾಗ್ಯನೆಂದರೆ ನಿನ್ನ ಅಷ್ಟೊಂದು ಹೆಸರುಗಳಲ್ಲಿ ಒಂದರ ಮೇಲೂ ನನಗೆ ಅನುರಾಗವುಂಟಾಗಲಿಲ್ಲ....]

"ವರ್ತಮಾನ ಯುಗಧರ್ಮವು ಎಲ್ಲ ಯುಗಧರ್ಮಗಳ ಸಮನ್ವಯವೂ ಆಗಿದೆ – ಜ್ಞಾನ, ಭಕ್ತಿ ಹಾಗೂ ಕರ್ಮ. ಜ್ಞಾನ, ಭಕ್ತಿ, ಕರ್ಮಗಳೆಲ್ಲವೂ ಆವಶ್ಯಕ. ಬರಿಯ ಒಂದರಿಂದ ಆಗದು, ಎಲ್ಲವೂ ಅತ್ಯಗತ್ಯ. ಶ್ರೀರಾಮಕೃಷ್ಣ – ಸ್ವಾಮಿ ವಿವೇಕಾನಂದರದು ಪರಿಪೂರ್ಣ ಆದರ್ಶ. ಈ ಜ್ವಲಂತ ಆದರ್ಶಗಳನ್ನು ನಮ್ಮೆದುರು ಇಟ್ಟುಕೊಂಡು ನಡೆಯಬೇಕು. ಇನ್ನೇನು ಹೇಳಲಿ?

"ಇದೇ ತ್ಯಾಗ, ತಪಸ್ಸು, ಸಾಧನೆ. ಮತ್ತೆ ಇದೇ ಪ್ರೇಮವೂ ಕೂಡ. ಸಕಲರ ದುಃಖದಲ್ಲಿ ಅನುಕಂಪ, ಅವರ ದುಃಖವನ್ನು ನಿವಾರಿಸಲು ಜೀವನದುದ್ದಕ್ಕೂ ಪ್ರಯತ್ನಿಸುವುದು – ಇದೇ ಜೀವನ, ಇದೇ ಧ್ಯೇಯ. ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಇದೇ ಆದರ್ಶವನ್ನಿಟ್ಟುಕೊಂಡು ನಡೆಯಿರಿ. ಅದರಿಂದಲೇ ಎಲ್ಲವೂ ಸಿದ್ಧಿಸುವುದು. ನಿಶ್ಚಯವಾಗಿಯೂ ಅದು ಆಗುವುದು. ನಾವು ಆತನಿಂದ ದೂರವಿಲ್ಲ, ನಾವು ಅವನಿಗೆ ಅನ್ಯರಲ್ಲ. 'ಹಾಗಾಗುವುದು' ಎಂದು ಆತ ಭರವಸೆಯನ್ನು ನೀಡಿದ್ದಾನೆ, ನಾನು ಹೇಳುತ್ತಿದ್ದೇನೆ."

೮ ಮಾರ್ಚ್ ೧೯೩೫: ರಾತ್ರಿ ೮.೩೦ರ ವೇಳೆಗೆ ಭಕ್ತನು ರೈಲಿನಲ್ಲಿ ಬಂದು ತಲುಪಿದನು. 'ಹಾಲ್'ನಲ್ಲಿ ಕಾಲಿಡುತ್ತಲೇ ಬಾಬಾ ಅವನಿಗಾಗಿಯೇ ಇಷ್ಟು ಹೊತ್ತು ಹೊರಗಡೆ ಹಾಲ್‌ನಲ್ಲಿ ಕುರ್ಚಿಯಲ್ಲಿ ಕಾದು ಕುಳಿತಿರುವುದಾಗಿ ಹೇಳಿದರು. ಅವನು ಪ್ರಣಾಮ ಮಾಡಿ ಏಳುತ್ತಲೇ, "ನನಗಾಗಿ ಏನೇನು ತಂದಿರುವೆ?" ಎಂದು ಕೇಳಿದರು. ಭಕ್ತನು ಹಣ್ಣು, ಮಿಠಾಯಿ ಮುಂತಾದವುಗಳನ್ನು ಕೊಟ್ಟನು. ಬಾಬಾ ಬಹಳ ಸಂತೋಷದಿಂದ ಅವುಗಳನ್ನು ಸ್ವೀಕರಿಸಿದರು. ಭಕ್ತನು ಕುರ್ಚಿಯ ಬಳಿಯಲ್ಲೇ ನೆಲದ ಮೇಲೆ ಕುಳಿತನು.

ಬಾಬಾ ಹೇಳತೊಡಗಿದರು – "ಉದ್ದುದ್ದ ಉಪದೇಶದಿಂದ ಕೂಡಿದ ಪತ್ರಗಳನ್ನು ಬರೆಯುತ್ತೇನೆ ಅಥವಾ ಅನೇಕ ಮಾತುಗಳನ್ನಾಡುತ್ತೇನೆ, ಎಂದುಕೊಳ್ಳಬೇಡ. ಅವೆಲ್ಲ ನನ್ನಿಂದ ಸಾಧ್ಯವಿಲ್ಲ. ನನಗೆಷ್ಟು ಕೆಲಸವಿದೆ, ಹಾಗೂ ಈಗ ನನಗೆಷ್ಟು ವಯಸ್ಸು, ನೋಡುತ್ತಿರುವೆಯಲ್ಲ? ಗುರುಗಿರಿ ಮಾಡುವುದು ನಮ್ಮ ಕರ್ಮವಲ್ಲ. ಯಾರು ನಿಜವಾಗಿಯೂ ಆತನನ್ನು ಪ್ರೀತಿಸುವರೋ, ಆತನನ್ನು ಪಡೆಯಲಿಚ್ಛಿಸುವರೋ– ಅವರು ಬಂದಾಗ ಕಷ್ಟವೆನಿಸುತ್ತದೆ. ಅವರ ಬಗ್ಗೆ ಹೇಳುತ್ತೇನೆ, 'ಠಾಕೂರ್, ಇಲ್ಲಿ ನೋಡು, ನಿನ್ನ ಭಕ್ತರು ಬಂದಿದ್ದಾರೆ. ನೀನವರನ್ನು ಸ್ವೀಕರಿಸು,' ಎಂದು ಅವರ ಬಳಿ ಒಪ್ಪಿಸಿಬಿಡುತ್ತೇನೆ. ಮಾಡಬೇಕಾದ್ದನ್ನು ಅವರು ಮಾಡುತ್ತಾರೆ.

"ಅವರನ್ನು ಪ್ರೀತಿಸುವ ಬಗೆಯೆಂದರೆ ವ್ಯಾಕುಲತೆಯಿಂದ ಕರೆಯುವುದು. ಅವರಲ್ಲದೆ ನಿನ್ನವರಾರೂ ಇಲ್ಲ – ಇದನ್ನು ತಿಳಿ. ಅವರೊಬ್ಬರೇ ಇರುವವರು, ಅವರೇ ಎಲ್ಲವೂ ಆಗಿರುವರು. ನೀನು ಅವರ ಸ್ವರೂಪವನ್ನು ಪಡೆಯಲಿಚ್ಛಿಸಿದ್ದರೆ, 'ಪ್ರಭು, ದರ್ಶನ ನೀಡು – ಯಾರು ಇಲ್ಲಿಗೆ ಬರುವರೋ ಅವರಿಗೆ ನೀವು ದರ್ಶನ ಕೊಡುತ್ತೀರೆಂದು ನೀವೇ ಹೇಳಿದ್ದೀರಿ. ನಿಮ್ಮ ಪ್ರತಿಜ್ಞೆಗೆ ನೀವು ಬದ್ಧರಾಗಿದ್ದೀರಿ' ಎಂದು ಭಗವಂತನಿಗೆ ಹೇಳು.

"ಖಂಡಿತವಾಗಿಯೂ ಆತನು ದರ್ಶನವನ್ನು ನೀಡುವನು. ಆತ ನಿನ್ನಿಂದ ಅಪೇಕ್ಷಿಸುವುದು ಒಂದು ವಸ್ತುವನ್ನು ಮಾತ್ರ– ವ್ಯಾಕುಲತೆ, ಆಗ್ರಹ. ಆತನಿನ್ನೇನನ್ನೂ ಹೇಳಿಲ್ಲ. ಇದನ್ನು ಮಾತ್ರವೇ ಹೇಳಿರುವನು. 'ಪ್ರಭು, ವ್ಯಾಕುಲತೆಯನ್ನು ನೀಡು' ಎಂದು ಪ್ರಾರ್ಥಿಸು."

ಮಾರನೆಯ ದಿನ ಸಂಜೆ: ಬಾಬಾ ಆರತಿಯ ನಂತರ ಕುರ್ಚಿಯಲ್ಲಿ ಸುಮ್ಮನೆ ಕುಳಿತಿದ್ದಾರೆ. ಇನ್ನೂ ಯಾರೂ ಪ್ರಣಾಮ ಮಾಡಲು ಬಂದಿಲ್ಲ. ಕೈಜೋಡಿಸಿ ಗಂಭೀರ ಧ್ವನಿಯಲ್ಲಿ ಪ್ರಾರ್ಥಿಸುತ್ತಿದ್ದಾರೆ:

ಓಜೋऽಸಿ ಓಜೋ ಮಯಿ ಧೇಹಿ।
ತೇಜೋऽಸಿ ತೇಜೋ ಮಯಿ ಧೇಹಿ।
ವೀರ್ಯಮಸಿ ವೀರ್ಯಂ ಮಯಿ ಧೇಹಿ।
ಸಹೋऽಸಿ ಸಹೋ ಮಯಿ ಧೇಹಿ।
ಬಲಮಸಿ ಬಲಂ ಮಯಿ ಧೇಹಿ॥

ತರುವಾಯ ತಮ್ಮಲ್ಲೇ ಹೇಳುತ್ತಿದ್ದಾರೆ: "ಬ್ರಹ್ಮ ನಿರೂಪಣೆ? ಹಲ್ಲುಕಿರಿದು ನಕ್ಕಂತೆ. ನಾನು ನಗದಿದ್ದರೂ ನಗುತ್ತಿದೆ. ನಿರೂಪಣೆ ಮಾಡದಿದ್ದರೂ ನಿರೂಪಿತವಾಗಿದೆ. ನಿನ್ನ ನಿರೂಪಣೆಯ ಅಪೇಕ್ಷೆಯಿಲ್ಲ – ನಿರಪೇಕ್ಷತೆ, ಸೂರ್ಯನಂತೆ ಝಗಝಗನೆ ಪ್ರಕಾಶಿಸುತ್ತಿದ್ದರೂ ನಿನ್ನ ಕಣ್ಣುಗಳನ್ನು ಕಟ್ಟಲಾಗಿರುವುದರಿಂದ ನಿನಗೆ ಕಾಣಿಸುತ್ತಿಲ್ಲ. ಮನಸ್ಸಿನಲ್ಲಿ ಕೊಳೆಯಿದೆ, ಅದನ್ನು ಒರೆಸಿಕೊಳ್ಳಬೇಕು. ಅದೇ ಸಾಧನೆ. ಎಂತಹ surrounding ನಲ್ಲಿ (ಪರಿಸರದಲ್ಲಿ) ಇರುತ್ತೀಯೋ ಆ ರೀತಿಯೇ ಮನಸ್ಸಿನ ಗ್ರಹಿಕೆ, ವಿಶ್ವಾಸಗಳು ಬೆಳೆಯುವುವು. ಆದ್ದರಿಂದಲೇ **'ಬ್ರಹ್ಮ ಸತ್ಯಂ ಜಗನ್ಮಿಥ್ಯಾ'** ಎಂಬ ತತ್ತ್ವವನ್ನು ಸರ್ವದಾ ಅನುಭವಿಸುತ್ತಿರುವ ಸಾಧುಗಳ ಸಂಗ ಅಗತ್ಯ.

" 'ಸಾಧು' ಎಂದರೆ ಯಾರು? ಯಾರು ಸತತವಾಗಿ **ಆತನ** ಚಿಂತನೆ ಮಾಡುತ್ತಾನೋ, ಅತನ ಮೇಲೆ ನಿರ್ಭರನಾಗಿರುವನೋ, ನಿರಭಿಮಾನಿಯೋ, ಪವಿತ್ರನೋ, ನಿಃಸ್ವಾರ್ಥಿಯೋ ಅವನೇ ಸಾಧು. 'ನಾಹಂ ನಾಹಂ, ತುಹೂ ತುಹೂ.' (ನಾನಲ್ಲ, ನೀನು). ನಾವೇನಾದರೂ ಮಾಡುತ್ತಿದ್ದೇವೆಯೇನು? ನಮ್ಮಿಂದೇನಾದರೂ ಮಾಡಲು ಸಾಧ್ಯವೇನು? ಯಾರು ಇಲ್ಲಿ (ಹೃದಯವನ್ನು ತೋರುತ್ತ) ನೆಲೆಸಿರುವನೋ ಆತನೇ ಮಾಡಿಸುತ್ತಿದ್ದಾನೆ. ಆತನ ಇಚ್ಛೆಯಿಂದಲೇ ಎಲ್ಲವೂ ನಡೆಯುತ್ತಿದೆ. ನಿಜವಾಗಿಯೂ ಹೇಳುತ್ತಿದ್ದೇನೆ – ಆ ಅನುಭವ ನನಗಾಗುತ್ತಿದೆ – ಜೀವನದ ಹೆಜ್ಜೆಹೆಜ್ಜೆಗೂ. ಆತನ ಇಚ್ಛೆ ಹಾಗೂ ಆತನ ಕೃಪೆಯಿಲ್ಲದಿದ್ದರೆ ಯಾರಿಂದೇನು ಮಾಡಲು ಸಾಧ್ಯ? ಪ್ರಭು, 'ನಾನಲ್ಲ, ನೀನು' ('ನಾಹಂ ನಾಹಂ, ತುಹೂ ತುಹೂ') ಇವು ಶ್ರೀರಾಮಕೃಷ್ಣರೇ ಉಚ್ಚರಿಸಿದ ಮಾತುಗಳು. ಇವೇ ಮಹಾವಾಕ್ಯಗಳು. ಅವನ್ನು ಜಪಿಸಿದರೆ ಸಿದ್ಧಿ ಪ್ರಾಪ್ತಿಯಾಗುತ್ತದೆ.